ವಿದ್ದಂತೆ. ಗೃಹಸ್ಥರೂ ಸಹ ಆಧ್ಯಾತ್ಮಿಕ ಸಾಧನೆಯಲ್ಲಿ ಗುರಿಮುಟ್ಟ ಬಹುದು ಎಂದು. ನಾಲ್ಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮ, ಮಿಕ್ಕ ಬ್ರಹ್ಮಚರ್ಯ, ವಾನಪ್ರಸ್ಥ, ಸಂನ್ಯಾಸಾಶ್ರಮಗಳಿಗೆ ಆಧಾರವೆನ್ನ ಬಹುದು. ಲೋಕಕಲ್ಯಾಣ ಕಾರ್ಯಕ್ಕೂ ಅವಕಾಶವುಂಟು. ಸತಿ-ಪತಿಯರ ಹೊಂದಾಣಿಕೆಯಿಂದ ಜಗತ್ತನ್ನೇ ಗೆಲ್ಲಬಹುದು. ಶ್ರೀರಾಮ ಕೃಷ್ಣರ ಜೀವನದ ಪರಿವರ್ತನೆಯತ್ತ ಗಮನಿಸೋಣ.

ಶ್ರೀರಾಮಕೃಷ್ಣರು ಗೃಹಸ್ಥ-ಸಂನ್ಯಾಸಿ! ಸಂನ್ಯಾಸ ರಹಸ್ಯವಾಗಿತ್ತು. ಶಾರದಾದೇವಿಯವರು ಪತಿಯ ಅನಾರೋಗ್ಯವನ್ನು ತಿಳಿದು, 'ಸತಿ'ಯ ಕರ್ತವ್ಯವನ್ನು ನಿರ್ವಹಿಸುವ ಸಲುವಾಗಿ ದಕ್ಷಿಣೇಶ್ವರಕ್ಕೆ ಬಂದರು. ಆದರೆ ಪತಿಯ ಪ್ರೀತಿಯ ಸೆಳೆತದಿಂದ ಬಂಧಿತರಾದರು. ಶ್ರೀರಾಮಕೃಷ್ಣರು ಅಧ್ಯಾತ್ಮ ಸಾಧನೆಯ ಅಂತಿಮ ಘಟ್ಟದಲ್ಲಿದ್ದರು. ಆದರೂ 'ಗೃಹಸ್ಥಧರ್ಮ'ವನ್ನು ಮರೆತಿರಲಿಲ್ಲ. ಐಹಿಕ ಸುಖ, ಭೋಗಗಳನ್ನು ಗಮನಿಸಿದವರಲ್ಲ. ಸತಿಯ ಮನೋಧರ್ಮವನ್ನು ಅರಿಯುವ ಸಂದರ್ಭದಲ್ಲಿ ಶ್ರೀರಾಮಕೃಷ್ಣರ ತ್ಯಾಗದ ಅರಿವಾಗುತ್ತದೆ. ಒಂದು ದಿನ ಏಕಾಂತದಲ್ಲಿದ್ದಾಗ 'ನನಗೆ ಜಗತ್ತಿನ ಮಹಿಳೆಯರೆಲ್ಲರೂ ಮಾತೃಸಮಾನರು. ಆದರೆ ನೀನು ನನ್ನ ಕೈಹಿಡಿದ ಧರ್ಮಪತ್ನಿ. ನೀನು ಇಚ್ಛಿಸುವುದಾದರೆ ನಾನು ಗೃಹಸ್ಥ ಧರ್ಮವನ್ನು ಅನುಸರಿಸುತ್ತೇನೆ' ಎಂದರು. ಇದು ಕೇವಲ ಅಕ್ಷರಗಳ ಜೋಡಣೆಯ ವಾಕ್ಯವಾಗಿರಲಿಲ್ಲ. ಮನದಾಳದಿಂದ ಹೊರಬಂದ ಅಭಯ ಘೋಷಣೆ! ಬಹುವಾಗಿ ಉತ್ಕೃಷ್ಟವೆಂದು ಹೇಳಲ್ಪಡುವ 'ಸಂನ್ಯಾಸ'ವನ್ನೇ ತ್ಯಾಗ ಮಾಡಿದ ಮಹಾನ್ ಘಟನೆ! ಧರ್ಮಕ್ಕೆ ತೆತ್ತ ಬೆಲೆ! ಆದರೆ ಶಾರದಾದೇವಿಯವರಿಂದ ಬಂದ ಉತ್ತರ ಇನ್ನೂ ಹೆಚ್ಚಿನದು. ಅದನ್ನು ಅವರ ಜೀವನದಲ್ಲಿ ಕಾಣೋಣ. ಶ್ರೀರಾಮಕೃಷ್ಣರು ಸಾಕ್ಷಾತ್ಕರಿಸಿಕೊಂಡ ದಿವ್ಯಮಂತ್ರಗಳು ಲೋಕಕಲ್ಯಾಣಕ್ಕಾಗಿ. ಅವುಗಳ ಸಫಲತೆಗೆ ಶಕ್ತಿಯಾಗಿ ಜೊತೆಗೂಡಿ 'ಪತಿಗೆ ತಕ್ಕ ಸತಿಯಾಗಿ' ನಡೆದುಕೊಂಡದ್ದು ಹೇಗೆ?

ಶಾರದಾದೇವಿಯರು ಶ್ರೀರಾಮಕೃಷ್ಣರನ್ನು ಹತ್ತಿರದಿಂದ ಕಂಡು, ಜೊತೆಯಲ್ಲಿ ಕೆಲವು ತಿಂಗಳುಗಳ ಕಾಲ ಕಳೆದದ್ದು, ಸುಮಾರು ಅವರ ಹದಿಮೂರನೇ ವಯಸ್ಸಿನಲ್ಲಿ. ತಮ್ಮ ಪತಿ ಅಸಾಮಾನ್ಯರು ಎಂದರಿತರು. ಸುಮಾರು ನಾಲ್ಕು ವರ್ಷಗಳ ನಂತರ ಅವರೊಡನೆ ಗೃಹಸ್ಥ ಜೀವನವನ್ನು ಪ್ರಾರಂಭಿಸಿದರು ನವಯುವತಿ! ಸಂಸಾರದ ಬಗ್ಗೆ ಸಹಜವಾಗಿ ನಾಲ್ಕಾರು ಕನಸುಗಳಿದ್ದಿರಬಹುದು, ಆದರೆ ಯಾವುದನ್ನೂ ಹೊರಗೆಡವಿದವರಲ್ಲ. ಇದ್ದಕ್ಕಿದ್ದಂತೆ ಪತಿಯ ಅನಾರೋಗ್ಯದ ಸುದ್ದಿ ಕೇಳಿ ಸಮಾಜದ ಯಾವ ಸಂಪ್ರದಾಯಗಳಿಗೂ ಅಂಜದೆ, ಅಳುಕದೆ, ಕರ್ತವ್ಯ ನಿಷ್ಠೆಯಿಂದ ಧಾವಿಸಿ ದಕ್ಷಿಣೇಶ್ವರಕ್ಕೆ ಬಂದರು. ಒಬ್ಬ ಹಳ್ಳಿಯ ಅನಕ್ಷರಸ್ಥೆ ಯುವತಿ ಇಟ್ಟ ದಿಟ್ಟ ಹೆಜ್ಜೆ ಅದು. ದಕ್ಷಿಣೇಶ್ವರದಲ್ಲಿಯೂ ಸಹ ಸಂಸಾರ ನಿರ್ವಹಣೆಗಾಗಿ ಯಾವ ಅನುಕೂಲವನ್ನೂ ಬಯಸದೇ 'ಹಾಸಿಗೆ ಇದ್ದಷ್ಟು ಕಾಲು ಚಾಚು'ವ ಅಲ್ಪ ತೃಪ್ತಿಯಿಂದ ಸಂತೋಷವಾಗಿ ಹೊಂದಿಕೊಂಡರು. ಸರಳ, ನಿರ್ಮಲ ಹೃದಯದ ದಂಪತಿಗಳ ಗೃಹಸ್ಥಜೀವನ ಹೀಗೆ ಪ್ರಾರಂಭವಾಯಿತು.

ಸಾಮಾನ್ಯವಾಗಿ ಒಬ್ಬ ಮಹಿಳೆ ಧನ, ಕನಕ, ಮಕ್ಕಳನ್ನು ಬಯಸುವುದು ತಪ್ಪಲ್ಲ. ಗೃಹಸ್ಥರು ಆ ರೀತಿಯಾಗಿಯೂ ಆದರ್ಶ ದಂಪತಿಗಳಾಗಿ ಬಾಳಬಹುದು, ಆದರೆ ಶಾರದಾದೇವಿಯವರು ಧರೆಗೆ ಬಂದಿರುವುದು 'ಆದಿಶಕ್ತಿ'ಯ ಅಂಶದಿಂದ. ಲೋಕಹಿತಕ್ಕಾಗಿ, ಲೋಕಮಾತೆಯಾಗಿ ಶ್ರೀರಾಮಕೃಷ್ಣರ ಅವತಾರಕಾರ್ಯಕ್ಕೆ 'ಶಕ್ತಿ'ಯಾಗಿ ಸೇರಿದರು. ತ್ಯಾಗವಿಭೂಷಿತೆ! ಸತಿ-ಪತಿಯರ ಕರ್ತವ್ಯ ಆದರ್ಶವಾದ್ದು. ಶ್ರೀರಾಮಕೃಷ್ಣರ ಹಾಗೂ ಶಾರದಾದೇವಿಯವರ ಜೀವನದ ಪರಿವರ್ತನೆಯ ಮಹತ್ತರ ಸಂದರ್ಭದಲ್ಲಿ ಆಡಿರುವ ಮಾತುಗಳು ಲೋಕೋತ್ತರವಾದದ್ದು. ತ್ಯಾಗದ ಮಹತ್ವವನ್ನು ಜಗತ್ತಿಗೇ ಸಾರಿರುವಂತಹದ್ದು.

**'ದೇವರು-ಧರ್ಮ' :** ಶ್ರೀರಾಮಕೃಷ್ಣರನ್ನು 'ಸರ್ವಧರ್ಮ ಸಮನ್ವಯಾಚಾರ್ಯ' ಎಂದು ಕರೆದಿದ್ದಾರೆ. ಭಾರತದಲ್ಲಿ ಆಗಿನ ಕಾಲದಲ್ಲಿ ಸಾಮಾಜಿಕ ಅವ್ಯವಸ್ಥೆಗೆ ಕಾರಣವಾಗಿದ್ದು 'ದೇವರು-ಧರ್ಮ'ಗಳ ವಿಷಯದಲ್ಲಿ ಭಿನ್ನಾಭಿಪ್ರಾಯಗಳು, ಜಾತಿ, ಮತಗಳಲ್ಲಿ ಭೇದಭಾವ, ಅತ್ಯಾಚಾರ, ಅನಾಚಾರಗಳು. ಶ್ರೀರಾಮಕೃಷ್ಣರು ಪ್ರಕೃತಿಯ ರಹಸ್ಯವನ್ನರಿಯಲು ಭವತಾರಿಣಿಯ ಸನ್ನಿಧಿಯಲ್ಲಿ ಕಠಿಣ ಸಾಧನೆಯಿಂದ ಸಾಕ್ಷಾತ್ಕರಿಸಿಕೊಂಡ ಪರಮ ಸತ್ಯ 'ದೇವನೊಬ್ಬ ನಾಮ ಹಲವು'; 'ಜೀವ-ಶಿವ ಅಭೇದ', 'ಜೀವಸೇವೆಯೇ ಶಿವಸೇವೆ' ಎಂದು. ಎಷ್ಟು ಮತಗಳೋ ಅಷ್ಟು ಪಥ ಯಾವ ದಾರಿಯಲ್ಲಿ ಹೋದರೂ ಕೊನೆಗೆ ತಲುಪುವುದು ಒಂದೇ ಕಡೆ. ದೇವರು ಅವರವರ ಭಾವಕ್ಕೆ ತಕ್ಕಂತೆ, ತಮ್ಮ ತಮ್ಮ ಧರ್ಮದ ಮೂಲಕ ತಲುಪಬಹುದು. ಶ್ರೀರಾಮಕೃಷ್ಣರು ಇದನ್ನು ಅನುಷ್ಠಾನ ಮಾಡಿ ಜಗತ್ತಿಗೇ ಸಂದೇಶ ನೀಡಿದರು. ಶಾರದಾದೇವಿಯವರಿಗೆ ಪತಿಯೇ ದೇವರು! ಸ್ವಾಮಿಜಿಯವರಿಗೆ ದೀನ-ದರಿದ್ರರೇ ದೇವರು!

**ಸತ್ಯನಿಷ್ಠರು:** ಶ್ರೀರಾಮಕೃಷ್ಣರು ಅಪ್ಪಟ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರು. ಆಚರಣೆಯನ್ನು ಮೀರಿದವರಲ್ಲ. ಕೋಲ್ಕತ್ತಕ್ಕೆ ಅಣ್ಣ ರಾಮಕುಮಾರನ ಜೊತೆಯಲ್ಲಿ ಬಂದರು. ರಾಣಿ ರಾಸಮಣಿ ಎಂಬ ಬೆಸ್ತ ಮಹಿಳೆ ಕಾಳಿಯ ಭಕ್ತೆ ಭವತಾರಿಣಿಯ ಭವ್ಯ ಮಂದಿರವನ್ನೇ ಕಟ್ಟಿಸಿದ್ದಳು. ಬೆಸ್ತರವಳು ಕಟ್ಟಿಸಿದ ಮಂದಿರ ಎಂಬ ಕಾರಣಕ್ಕೆ ಮೇಲ್ವರ್ಗದವರು ಅಲ್ಲಿ ಪ್ರತಿಷ್ಠೆ, ಪೂಜಾದಿಗಳಿಗೆ ಯಾರೂ ಮುಂದೆ ಬಂದಿರಲಿಲ್ಲ. ರಾಮಕುಮಾರನ ಸಲಹೆಯ ಮೇರೆಗೆ ತನ್ನ ಕುಲಗುರುಗಳಿಗೆ ದಾನ ಮಾಡಿಬಿಟ್ಟಳು. ನಂತರ ರಾಮಕುಮಾರನೇ ಭಗವತಿಯ ಪ್ರತಿಷ್ಠ ಕಾರ್ಯಕ್ಕೆ ಹಾಗೂ ಅರ್ಚಕನಾಗಿಯೂ ನೇಮಿಸಲ್ಪಟ್ಟನು. ಇದು ತಮ್ಮ ಶ್ರೀರಾಮಕೃಷ್ಣರಿಗೆ ಒಪ್ಪಿಗೆಯಾಗಲಿಲ್ಲ. ಪ್ರತಿಷ್ಠಾಪನೆಯ ದಿನ ಅಣ್ಣನೊಡನೆ ಬಂದರೂ, ಅಲ್ಲಿ ಪ್ರಸಾದ ಸ್ವೀಕರಿಸಲಿಲ್ಲ; ಕೆಲವು ದಿನ ಕಳೆಯಿತು. ಅರ್ಚಕ ವೃತ್ತಿಯನ್ನು ಸ್ವೀಕರಿಸಿದ ಮೇಲೆ ರಾಮಕುಮಾರ ದಕ್ಷಿಣೇಶ್ವರದಲ್ಲಿಯೇ ಉಳಿಯಬೇಕಾಯಿತು. ಶ್ರೀರಾಮಕೃಷ್ಣರೂ ಬಂದರು. ಆದರೂ ತಮ್ಮ ಊಟ, ಸಂಪ್ರದಾಯಗಳನ್ನು ಬಿಡಲಿಲ್ಲ. ಕಡಲೆಪುರಿ, ಇತ್ಯಾದಿಗಳಲ್ಲಿಯೇ ದಿನ ಕಳೆಯುತ್ತಿದ್ದರು. ಅಣ್ಣನಿಗೆ ಧರ್ಮಸಂಕಟ! ಒಂದು ಉಪಾಯ ಹೊಳೆಯಿತು. ತಮ್ಮನಿಗೆ, 'ನೋಡಪ್ಪ ಭಗವತಿಗೆ ಅರ್ಪಿಸುವ ನೈವೇದ್ಯಗಳೆಲ್ಲ ಪವಿತ್ರ ಗಂಗಾಜಲದಿಂದಲೇ ತಯಾರಿಸುವುದು. ಪತಿತ ಪಾವನೆ ಗಂಗೆ! ಆದ್ದರಿಂದ ಇಲ್ಲಿನ ಪ್ರಸಾದ ಸ್ವೀಕರಿಸುವುದು ದೋಷವಾಗುವುದಿಲ್ಲ' ಎಂದಾಗ ಶ್ರೀರಾಮಕೃಷ್ಣರು ಆ